೧೦.೫೦ ಎ.ಎಂ.

ಶ್ರೀ ಗೋಪಿನಾಥ್ ಆರ್. ಸಾಂಡ್ರ.—ಮಾನ್ಯ ಅಧ್ಯಕ್ಷರೇ, ಮಳೆ ಸಕಾಲದಲ್ಲಿ ಬರದೆ ಬಿತ್ತನೆಯಾಗದೆ ಹೊಲಗಳಲ್ಲಿ ಒಣೂ ಕೆಲಸವಿಲ್ಲದೆ ಕೂಲಿಕಾರರಿಗೆ ಬಹಳ ತೊಂದರೆಯಾಗಿದೆ. ಮಾನ್ಯ ಮಂತ್ರಿಗಳಿಗೆ ಅಧಿಕಾರಿಗಳು ಏನು ರಿಪೋರ್ಟ್ ಕೊಟ್ಟಿದ್ದಾರೆ ಅದು ಸರಿ ಇಲ್ಲ.....

ಛೇರ್ಮನ್.—ನಿಯಮ ೫೩ಳಿಗರಲ್ಲಿ ಚರ್ಚೆಗೆ ಅವಕಾಶ ಇಲ್ಲ. ತಾವು ಒಬ್ಬರು ಚರ್ಚೆ ಮಾಡಿದರೆ ಅದು ಒಂದು ಪದ್ಧತಿಯಾಗಿ ಮುಂದುವರಿಯುತ್ತದೆ. ದಯವಾಡಿ ಬೇಡ.

ಶ್ರೀ ಕೆ.ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಮನಸ್ಸನ್ನು ನಾನು ಅರಿತು ಕೊಂಡಿದ್ದೇನೆ. ಮಳೆ ಬಾರದೆ ಬಿತ್ತನೆ ಕೆಲಸ ಆಗದೆ ರೈತರಿಗೆ, ಕೂಲಿಕಾರರಿಗೆ ತೊಂದರೆಯಾಗಿರುವಂತಹ ಪ್ರಸಂಗದಲ್ಲಿ ಅವರಿಗೆ ಪೂರ್ಣವಾದಂಥ ಸಹಾಯವನ್ನು ಕೊಡುವುದರ ಸಲುವಾಗಿ ನಾನು ಇಂದೇ ಜಿಲ್ಲಾಧಿಕಾರಿಗಳಿಗೆ ತಿಳಿಸುತ್ತೇನೆ. ಆದರೆ ಎಲ್ಲೆ ಕೃಷಿ ಉದ್ಯೋಗ ನಡೆಯುತ್ತಿಡೆ ಅಂತಹ ಕಡೆ ಸಹ ಪರಿಸ್ಥಿತಿಯನ್ನು ಪರಾಮರ್ಶಿಸಿ ಕ್ರಮ ಕೈಗೊಳ್ಳಲಿಕ್ಕೆ ತಿಳಿಸುತ್ತೇನೆ.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಬಿ.ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಜಲಾಶಯದ ಕರುಣೆ ಹಾಗೂ ಕೋಚರಿ ಯಾತ ೀರಾವರಿ ಯೋಜನೆಯ ಎರಡನೆಯ ಹಾಗೂ ಮೂರನೆಯ ಹಂತದ ಕೆಲಸವನ್ನು ಕೂಡಲೇ ಪ್ರಾರಂಭಿಸುವ ಬಗ್ಗೆ.

೨) ಬೆಂಗಳೂರು–ಪೂನಾ ಹೆದ್ದಾರಿಗೆ ಹೊಸ ಸೇತುವೆ ಆಗಿರುವ ಸ್ಥಳಗಳಲ್ಲಿ ಫಳಿ ಹಾಕಿ ನೀರು ನಿಲ್ಲಿಸುವ ಬಗ್ಗೆ.

೩) ಹುಕ್ಕೇರಿ ತಾಲ್ಲೂಕಿನ ಚಿಕ್ಕಾಲ ಗುಡ್ಡ–ಇಂಗಳಿ ರಸ್ತೆಯನ್ನು ಡಾಂಬರೀಕರಣಗೊಳಿಸುವ ಬಗ್ಗೆ.

೪) ಗೋಕಾಕ್ ತಾಲ್ಲೂಕಿನ ತವಗ ಗ್ರಾಮದಲ್ಲಿ ಕೆರೆ ನಿರ್ಮಿಸುವ ಬಗ್ಗೆ ಈ ನಾಲ್ಕು ಅರ್ಜಿಗಳನ್ನು ನಾನು ಸಭೆಗೆ ಒಪ್ಪಿಸುತ್ತೇನೆ.

ಛೇರ್ಮನ್.—ಅರ್ಜಿಗಳನ್ನು ಒಪ್ಪಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಂ. ಕುಲದೀಪ್ ಸಿಂಗ್ ಆಯೋಗದ ವರದಿ ಬಗ್ಗೆ ಚರ್ಚಿಸುವುದಂ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಹಿತಾಸಕ್ತಿಯುಳ್ಳ ಮತ್ತು ಬಹಳ ಪ್ರಾಮುಖ್ಯವಾದ ವಿಷಯವಾಗಿರುವ ಶ್ರೀ ಕುಲದೀಪ್‌ಸಿಂಗ್ ಆಯೋಗದ ವರದಿಯನ್ನು ಚರ್ಚೆ ಮಾಡಬೇಕೆಂದು ನಾವು ಬರೆದು ಕೊಟ್ಟಿದ್ದೇವೆ. ಈಗಾಗಲೇ ಆ ವರದಿ ಪತ್ರಿಕೆಗಳಲ್ಲಿ ಬಿಡುಗಡೆಯಾಗಿದೆ. ವರದಿಯಲ್ಲಿರುವ ಎಲ್ಲಾ ವಿಚಾರಗಳು ಹೊರಗಡೆ ಬಂದಿವೆ. ಆದ್ದರಿಂದ ಅದರ ಬಗ್ಗೆ ನಮಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಈ ರಾಜ್ಯದಲ್ಲಿ ಭೂಮಿ ಹಗರಣ ನಡೆದಿದೆ. ಈ ಸದನದ ಒಬ್ಬ ಸದಸ್ಯರೂ ಸೇರಿದ್ದಾರೆ. ಹಿಂದೆ ಆ ಬಗ್ಗೆ ಚರ್ಚೆ ಮಾಡಿದಾಗ ಅಂದಿನ ಸರ್ಕಾರ ಈ ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟು ಸದನವನ್ನು ತಪ್ಪು ದಾರಿಗೆ ಎಳೆದಿರತಕ್ಕಂಥಾದ್ದು ಮತ್ತು ಈಗ ಬಂದಿರತಕ್ಕ ಚರ್ಚೆಗೂ ವಿಭಿನ್ನವಾಗಿರತಕ್ಕ ಈ ಸಂದರ್ಭದಲ್ಲಿ ನಾವು ಆ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇವೆ.

ಛೇರ್ಮನ್.—ನಿಯಮದ ಪ್ರಕಾರ ತಾವು ಕೇಳಬೇಕಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಹಿತಾಸಕ್ತಿ ಹೊಂದಿರತಕ್ಕ ವಿಷಯಗಳಿಗೆ ನಿಯಮಗಳು ಇಲ್ಲ. ಈ ವಿಷಯವನ್ನು ಚರ್ಚೆ ಮಾಡಲು ಮೇಲ್ಮನೆಯಲ್ಲಿ ಅವಕಾಶ ಕೇಳಿದ್ದಾರೆ. ಆದ್ದರಿಂದ ಇಲ್ಲಿ ತಾವು ಸಹ ಚರ್ಚೆಗೆ ಅವಕಾಶ ಕೊಡಬೇಕು. ಈ ರಾಜ್ಯದ ಭೂಮಿ ಹಗರಣವಾಗಿದೆ. ದಯವಾಡಿ ಈ ವಿಷಯವನ್ನು ಚರ್ಚೆ ಮಾಡಲು ಅವಕಾಶ ಮಾಡಿ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಛೇರ್ಮನ್.—ನಿಯಮಗಳ ಪ್ರಕಾರ ನಾವು ಹೋಗಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಈ ಹಿಂದೆ ಈ ಸದನದಲ್ಲಿ ಚರ್ಚೆ ನಡೆದ ವಿಷಯಕ್ಕೂ ಹಾಗೂ ಇವತ್ತು ಪತ್ರಿಕೆಗಳಲ್ಲಿ ಬಂದಂತಹ ವಿಷಯಕ್ಕೂ ಸಂಬಂಧವಿಲ್ಲ. ಮಾಜಿ ಮುಖ್ಯ ಮಂತ್ರಿಗಳು ಕೊಟ್ಟಿರುವಂತಹ ಹೇಳಿಕೆಯ ಆಧಾರದ ಮೇಲೆ ಹೊಸ ವಿಷಯಗಳು ಬೆಳಕಿಗೆ ಬಂದಿವೆ. ಆದ್ದರಿಂದ ಅದನ್ನು ಚರ್ಚೆ ಮಾಡಬೇಕಾದಂತಹ ಅಗತ್ಯ ಜಾಸ್ತಿ ಇದೆ. ಆದ್ದರಿಂದ ತಾವು ಒಂದು ಕಾಲವನ್ನು ನಿರ್ಧಾರಮಾಡಿಕೊಟ್ಟರೆ ಆ ಒಂದು ಸಂದರ್ಭದಲ್ಲಿ ನಾವು ಆ ಸಮಯವನ್ನು ಉಪಯೋಗಿಸಿ ಕೊಂಡು ಚರ್ಚೆ ಮಾಡಬಹುದು.

(ಮಾನ್ಯ ಉಪಾಧ್ಯಕ್ಷಣಿಯವರು ಅಧ್ಯಕ್ಷ ಪೀಠಕ್ಕೆ ಬಂದರು)

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಈಗಾಗಲೇ ಒಂದು ನೋಟಿಸ್ ಸಹ ಕೊಟ್ಟಿದ್ದೇವೆ. ನಾವು ಸಮಯದ ಆಧಾರದ ಮೇಲೆ ಪೂರ್ವಾನುಮತಿ ಪಡೆದು ಚರ್ಚೆಗೆ ಅವಕಾಶವನ್ನು ಕೇಳಿ ನೋಟಿಸ್ ಕೊಟ್ಟಿದ್ದೇವೆ. ಮಾನ್ಯ ಅಧ್ಯಕ್ಷರೇ ನಮ್ಮ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಎನ್. ಆರ್. ಐ. ಸಂಸ್ಥೆಗೆ ಒಲ್ಕ್ ಜಮೀನನ್ನು ಕೊಡುವಂತಹ ವಿಚಾರದಲ್ಲಿ ಇವತ್ತು ಹೊಸ ಹೊಸ ವಿಷಯಗಳು ಬೆಳಕಿಗೆ ಬಂದಿವೆ. ಹಿಂದೆ ಈ ಸದನದಲ್ಲಿ ಚರ್ಚೆ ಆದಂತಹ ಕಾಲದಲ್ಲಿ ಆಗ ಇದ್ದಂತಹ ಸರ್ಕಾರ ಕೊಟ್ಟಂತಹ ಮಾಹಿತಿಗಳು ಈ ಸದನವನ್ನು ತಪ್ಪು ದಾರಿಗೆ ಎಳೆಯತಕ್ಕಂಥ ಪ್ರಯತ್ನ ಮಾಡಿದ ರೀತಿಯಲ್ಲಿ ಇವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರಿಗೆ ಆ ಅಧಿಕಾರ ಇತ್ತೇ? ಸರ್ಕಾರದ ಅನುಮತಿ ಇಲ್ಲದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಜಮೀನು ಕೊಡತಕ್ಕಂಥಾ ಅಧಿಕಾರ ಆ ಕಾಲಕ್ಕೆ ಇತ್ತೆ ಮತ್ತು ಅದಕ್ಕೆ ಏನಾದರೂ ನಿಯಮಾವಳಿ ಇದ್ದುವೆ, ಇದ್ದರೆ ನಿಯಮಾವಳಿ ಪ್ರಕಾರ ಯಾರು ಇಷ್ಟು ದೊಡ್ಡ ಮೊತ್ತದ ಜಮೀನನ್ನು ಎನ್. ಆರ್. ಐ, ಸಂಸ್ಥೆಗೆ ಕೊಡುವುದಕ್ಕೆ ಅಧಿಕಾರವನ್ನು ಪಡೆದಿದ್ದರು? ಇದು ಬಹಳ ಮುಖ್ಯ ವಿಷಯ ಏಕೆಂದರೆ, ಇವತ್ತು ನ್ಯಾಯಮೂರ್ತಿ ಕಾಲಿದೀಪಸಿಂಗ್ ಆಯೋಗದ ವರದಿಯ ವಿಚಾರಗಳನ್ನು ಪತ್ರಿಕೆಗಳು ಪ್ರಕಟಣೆ ಮಾಡಿವೆ.

ಉಪಾಧ್ಯಕ್ಷಣಿಯವರು.—ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಮುಂದೆ ತಾವು ನೋಟಿಸ್ ಕಳಿಸಿದರೆ ಅದನ್ನು ತೆಗೆದುಕೊಳ್ಳೋಣ.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾವು ಈಗಾಗಲೇ ನೋಟೀಸ್ ಕೊಟ್ಟಿದ್ದೇವೆ. ತಾವು ಕಾಲವನ್ನು ನಿಗದಿಮಾಡಿ, ಇಂತಹ ಸಮಯಕ್ಕೆ ಈ ಚರ್ಚೆಯನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರೆ ನಮ್ಮದು ಅಭ್ಯಂತರವಿಲ್ಲ.

ಉಪಾಧ್ಯಕ್ಷಣಿಯವರು.—ಆ ಪ್ರಶ್ನೆ ಬಿಸ್‌ನೆಸ್‌ನಲ್ಲಿ ಇಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಈ ವಿಷಯ ಬಹಳ ಗಂಭೀರವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಪ್ರಮುಖವಾಗಿರತಕ್ಕ ವಿಷಯ ಈ ವಿಷಯ ರಾಜ್ಯದ ಮತ್ತು ರಾಷ್ಟ್ರದ ಜನತೆಯ ಗಮನವನ್ನು ಸೆಳೆದಿದೆ. ದಯವಿಟ್ಟು ತಾವು ಇದಕ್ಕೆ ಒಂದು ಅವಕಾತವನ್ನು ಮಾಡಿಕೊಡಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಈ ವಿಷಯ ಬರೀ ಕರ್ನಾಟಕ ರಾಜ್ಯದಲ್ಲೇ ಅಲ್ಲ, ಬೇರೆ ರಾಜ್ಯಗಳಲ್ಲೂ ಚರ್ಚೆಯಾಗುತ್ತಿದೆ.

ಉಪಾಧ್ಯಕ್ಷಣಿಯವರು.— ಈಗತಾನೇ ತಾವು ಪತ್ರವನ್ನು ಕಳುಹಿಸಿದ್ದೀರಿ. ಇದು ಯಾವ ರೂಲ್ ಪ್ರಕಾರ ಚರ್ಚೆಯಾಗಬೇಕೆಂದು ತಾವು ಸರಿಯಾಗಿ ಕಳುಹಿಸಿದರೆ ಆಮೇಲೆ ಅದಕ್ಕೆ ಟೈಮ್ ಫಿಕ್ಸ್ ಮಾಡಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ. —ಈ ವಿಷಯದ ಬಗ್ಗೆ ಚರ್ಚೆ ಮಾಡಬೇಕೆಂದು ಗಮನ ಸೆಳೆಯುವ ಸೂಚನೆಕೊಟ್ಟು ತಮ್ಮ ಗಮನವನ್ನು ಸೆಳೆದಿದ್ದೇವೆ.

ಉಪಾಧ್ಯಕ್ಷಣಿಯವರು.—ಇದು ಗಮನ ಸೆಳೆಯುವ ಸೂಚನೆ ಆಗಲಿಕ್ಕೆ ಸಾಧ್ಯವಿಲ್ಲ. ಈಗ ತಾನೇ ತಾವು ಪತ್ರ ಕಳುಹಿಸಿದ್ದೀರಿ. ಆದೂ ಅಲ್ಲದೆ ಸದನದಲ್ಲಿ ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಯಾವ ರೂಲ್ ಒಳಪಡುತ್ತದೊ ಆ ರೂಲ್‌ನಲ್ಲೇ ಇದನ್ನು ಕಳುಹಿಸುತ್ತೇವೆ. ತಾವು ಅದಕ್ಕೆ ಒಂದು ಸಮಯವನ್ನು ಗೊತ್ತುಮಾಡಿ, ಈ ವಿಚಾರದ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷಣಿಯವರು.—ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಬಂದಾಗ ಆ ವಿಚಾರವನ್ನು ತಾವು ಎತ್ತುವುದು ಸರಿಯೆನಿಸುತ್ತದೆ.

ಶ್ರೀ ಗೋವಿನಾಥ ಆರ್. ಸಾಂದ್ರ.—ಈ ವಿಷಯವನ್ನು ಚರ್ಚೆ ಮಾಡಲಿಕ್ಕೆ ಟೈಮರ್ ಫಿಕ್ಸ್ ಮಾಡಿ.

ಉಪಾಧ್ಯಕ್ಷೆಣಿಯವರು.—ಈಗ ತಾನೇ ಇದರ ಬಗ್ಗೆ ಪಶ್ನವನ್ನು ಕಳುಹಿಸಿದ್ದಾರೆ. ಅದು ಸಂಬಂಧಪಟ್ಟ ಮಂತ್ರಿಗಳಿಗೆ ಹೋಗಬೇಕು, ಅವರು ಇರಬೇಕು ಆಮೇಲೆ ಯಾವ ತರಹ ಚರ್ಚೆ ಮಾಡಬೇಕೆಂದು ತೀರ್ಮಾನ ಮಾಡಬಹುದು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇಂಥಾ ವಿಚಾರಗಳನ್ನು ತನ್ನ ಗಮನಕ್ಕೆ ತಂದಾಗ ಸಾಕಷ್ಟು ಸಾರಿ ಚರ್ಚೆ ಮಾಡಲಿಕ್ಕೆ ಸಮಯವನ್ನು ಗೊತ್ತು ಮಾಡಿರುವಂಥ ನಿದರ್ಶನಗಳು ಈ ಸದನದಲ್ಲಿ ಬೇಕಾದಷ್ಟು ಇವೆ. ಇದು ಸಾರ್ವಜನಿಕ ಹಿತದೃಷ್ಟಿಯಿಂದ ಬಹಳ ಪ್ರಾಮುಖ್ಯವಾಗಿರತಕ್ಕಂಥ ವಿಚಾರ. ಈ ರಾಜ್ಯದ ಬಡ ರೈತರ ಜಮೀನುಗಳನ್ನು ಕೊಳ್ಳೆ ಹೊಡೆದು ಬೇರೆಯವರಿಗೆ ಮಾರಾತಕ್ಕಂಥ ವಿಚಾರದಲ್ಲಿ ಲೋಪವಾಗಿರತಕ್ಕ ವಿಚಾರ, ಇವಕ್ಕೆ ತಾವು ಸಮಯವನ್ನು ಗೊತ್ತು ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷೆಣಿಯವರು.—ತಾವು ಇದರ ಬಗ್ಗೆ ಏನು ಪಶ್ನವನ್ನು ಕಳುಹಿಸಿದ್ದೀರಿ, ಇದರ ಬಗ್ಗೆ ವಿಚಾರ ಮಾಡಿ ಮತ್ತೆ ತಮಗೆ ತಿಳಿಸಲಾಗುವುದು. ಈಗ ಗಮನ ಸೆಳೆಯುವ ಸೂಚನೆ. ಶ್ರೀ ಕೆ. ಹೆಚ್. ಹನುಮೇಗೌಡರು.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಉಪಾಧ್ಯಕ್ಷೆಯವರೇ, ಈ ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡುವುದಕ್ಕೆ ಮಾನ್ಯ ಶಿಕ್ಷಣ ಮಂತ್ರಿಗಳು ಬರಬೇಕಾಗುತ್ತದೆ. ಈಗ ಮಾನ್ಯ ಶಿಕ್ಷಣ ಮಂತ್ರಿಯವರು ಮೇಲ್ಮನೆಯಲ್ಲಿ ಇದ್ದಾರೆ. ಆದ್ದರಿಂದ, ಈ ಗಮನ ಸೆಳೆಯುವ ಸೂಚನೆಯನ್ನು ಬೇರೆ ಸಮಯದಲ್ಲಿ ತೆಗೆದುಕೊಳ್ಳಬಹುದು.

ಉಪಾಧ್ಯಕ್ಷೆಣಿಯವರು.—ಶ್ರೀ ಶಿವಾನಂದ ಕೌಜಲಗಿಯವರು. ಇಲ್ಲ.

ಈಗ ಬೇಡಿಕೆಗಳ ಮೇಲೆ ಚರ್ಚೆ

ಶ್ರೀ ಯುತ ಬಿ. ಎಂ. ಇದಿನಬ್ಬ ಅವರು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಉಪಾಧ್ಯಕ್ಷೆಣಿಯವರೇ, ಈ ದಿವಸ ವಿರೋಧ ಪಕ್ಷದ ಸದಸ್ಯರುಗಳು ಸಭೆಗೆ ಬಂದಿಲ್ಲ. ಅವರು ಹೊರಗೇ ಇದ್ದಾರೆ. ಅವರನ್ನು ಬಿಟ್ಟು ನಾವು ಚರ್ಚೆ ಮಾಡುವುದು ಸರಿಯಲ್ಲ. ಅವರ ಮನ ಒಲಿಸಿ ಸದನಕ್ಕೆ ಬರುವ ಹಾಗೆ ಮಾಡಬೇಕು. ಅವರ ಸ್ಟೈಲ್ ಎಷ್ಟು ಇದೆಯೋ ಅವರ ಪ್ರಕಾರ ಅವರಿಗೆ ಚರ್ಚೆ ಮಾಡುವುದಕ್ಕೆ ಸಮಯವನ್ನು ನಿಗದಿ ಮಾಡಬಹುದು ಆದರೆ ಅವರು ಇಲ್ಲದೆ ನಾವು ಒನ್ ಸೈಡ್ ಚರ್ಚೆ ಮಾಡಿದರೆ ಅದು ಅಷ್ಟು ಸಮಂಜಸವಾಗುವುದಿಲ್ಲ.

ಉಪಾಧ್ಯಕ್ಷೆಣಿಯವರು.—ಮಾನ್ಯ ಸ್ಪೀಕರ್‌ರವರು, ಅವರುಗಳನ್ನು ಕರೆಸಿ ಸಮಾಲೋಚನೆ ನಡೆಸುತ್ತಾ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಉಪಾಧ್ಯಕ್ಷೆಣಿಯವರೆ, ಸದನದಲ್ಲಿ ಈ ರೀತಿ ಅವರಿಲ್ಲದೆ ಚರ್ಚೆ ಮಾಡಿದರೆ ಏನಾಗುತ್ತದೆಂದರೆ, ಅವರಿಗೆ ೧೮೪ ಜನ ಸದಸ್ಯರ ಬೆಂಬಲ ಇದೆ, ಇವತ್ತಿನದಿವಸ ನಮ್ಮನ್ನು ದಮನ ಮಾಡುತ್ತಾರೆಂದು ಅವರು ಹೇಳುವುದಕ್ಕೆ ಅವಕಾಶವಾಗುತ್ತದೆ. ಅವರು ಆರೀತಿ ಹೇಳಬಾರದು, ಈ ಬಗ್ಗೆ ಅವರು ಸುಲಭವಾಗಿ ಸ್ಟೇಟ್‌ಮೆಂಟ್ ಕೊಡುತ್ತಾರೆ. ನಾವು ಇದರ ಬಗ್ಗೆ ಕನ್ಸಿಡರೇಟ್ ಆಗಿ ನೋಡಿಕೊಂಡು ಒಂದು ನಿರ್ಣಯ ತೆಗೆದುಕೊಂಡರೆ ಚೆನ್ನಾಗಿರುತ್ತದೆ. ಇಲ್ಲದಿದ್ದರೆ ಅದು ಸರಿಯೆನಿಸುವುದಿಲ್ಲ ಎನ್ನುತಕ್ಕಂಥ ಮಾತನ್ನು ಹೇಳುತ್ತೇನೆ.

ಉಪಾಧ್ಯಕ್ಷೆಣಿಯವರು.—ಈಗಾಗಲೆ ಸ್ಪೀಕರ್‌ರವರು, ಅವರನ್ನು ಕರೆಸಿ ಮಾತನಾಡಲಿಕ್ಕೆ ತೀರ್ಮಾನ ಮಾಡಿದ್ದಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಒಂದು ಹತ್ತು–ಹದಿನೈದು ನಿಮಿಷಗಳ ಕಾಲ ಸದನವನ್ನು ಮುಂದೂಡಿ ಅವರನ್ನು ಕರೆಸಿ ಸಂಧಾನ ಮಾಡುವುದು ಒಳ್ಳೆಯದು.

ಉಪಾಧ್ಯಕ್ಷೆಣಿಯವರು.—ಈಗಾಗಲೆ ಸ್ಪೀಕರ್‌ರವರು ಇದರ ಬಗ್ಗೆ ವಿಚಾರ ಮಾಡುತ್ತಾ ಇದ್ದಾರೆ. ಅವರನ್ನು ಕರೆಸಿ ಈ ವಿಷಯವನ್ನು ಇತ್ಯರ್ಥ ಮಾಡುತ್ತಾರೆ.